DFA/888059

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 163 |
| ಮಾನ್ಯ ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12/09/2022 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2018-19 ರಲ್ಲಿ ನಡೆದಿದೆ ಎನ್ನಲಾದ ಸುಮಾರು 18 ಕೋಟಿ ರೂಪಾಯಿ ಹಗರಣವನ್ನು ಎಸಿಬಿಗೆ ವಹಿಸಲಾಗಿದ್ದು, ಹಗರಣದ ತನಿಖೆ ಇದುವರೆವಿಗೂ ಪ್ರಾರಂಭವಾಗದಿರಲು ಕಾರಣವೇನು; | 2018-19 ರಲ್ಲಿ ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೀದರ್‌ನಲ್ಲಿ ನಡೆದಿದೆ ಎನ್ನಲಾದ ಸುಮಾರು 18.00 ಕೋಟಿ ರೂಪಾಯಿಯ ಅವ್ಯವಹಾರ ACB ತನಿಖೆಯು ನ್ಯಾಯಾಲಯದ ನಿರ್ದೇಶನದಂತೆ ತಾತ್ಕಾಲಿಕವಾಗಿ ತಡೆಹಿಡಿದು ಆದೇಶಿಸಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ದಿನಾಂಕ 29.06.2018 ರಂದು ನೀಡಲಾಗಿರುವ ಅಭಿಯೋಜನಾ ಮಂಜೂರಾತಿಗೆ W.P. No.28544/2018, W.P.No. 29892-95/2018, W.P. No.38416/2018 ಮತ್ತು W.P. No.1613/2019 ರಲ್ಲಿ ಆಪಾದಿತ ಅಧಿಕಾರಿಗಳು/ಸಿಬ್ಬಂದಿಗಳು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು/ ಕಲಬುರಗಿಯಲ್ಲಿ ಮಧ್ಯಂತರ ತಡೆಯಾಜ್ಞೆ ಪಡೆದಿರುತ್ತಾರೆ. ಈ ಸಂಬಂಧ ಪಡೆಯಲಾಗಿರುವ ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸಲು ಕ್ರಮವಹಿಸಲಾಗಿದೆ. |
| ಆ) | ಪ್ರಾಥಮಿಕ ತನಿಖೆಯಲ್ಲಿ ಈ ಹಗರಣದಲ್ಲಿ ಭಾಗಿಯಾಗಿದ್ದ ಸಿಬ್ಬಂದಿಗಳ ವಿರುದ್ಧ ಕೈಗೊಳ್ಳಲಾದ ಕ್ರಮಗಳೇನು; | 1. ಡಾ\|\| ಚನ್ನಣ. ಬಿ (ಹಿಂದಿನ ನಿರ್ದೇಶಕರು,) ಮಾತ್ರ ಸಂಸ್ಥೆಯಾದ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡು ವಯೋನಿವೃತ್ತಿ ಹೊಂದಿರುತ್ತಾರೆ. ಇವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಈ ವಿಚಾರಣಾ ಆದೇಶಕ್ಕೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಅರ್ಜಿ ಸಂಖ್ಯೆ:WP No. 1677/2021 ರಲ್ಲಿ ಮಧ್ಯಂತರ ತಡೆಯಾಜ್ಞೆ ನೀಡಿದೆ. ಸದರಿಯವರ ಪಿಂಚಣಿ ಸೌಲಭ್ಯವನ್ನು ತಡೆಹಿಡಿಯಲಾಗಿದೆ.<br>2. ಡಾ\|\| ಶಿವಕುಮಾರ ಶೆಟಕಾರ್, ವೈದ್ಯಕೀಯ ಅಧೀಕ್ಷಕರು, ಬ್ರೀಮ್ಸ್ ಬೀದರ್ ಇವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಈ ವಿಚಾರಣಾ ಆದೇಶಕ್ಕೆ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಅರ್ಜಿ ಸಂಖ್ಯೆ:WP No. 1677/2021 ರಲ್ಲಿ ಮಧ್ಯಂತರ ತಡೆಯಾಜ್ಞೆ ನೀಡಿದೆ.<br>3. ಶ್ರೀ ಆನಂದಸಾಗರ ರೆಡ್ಡಿ, (ಹಿಂದಿನ ಮುಖ್ಯ ಆಡಳಿತಾಧಿಕಾರಿಗಳು) ಇವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಈ ವಿಚಾರಣಾ ಆದೇಶಕ್ಕೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ ಬೆಂಗಳೂರು ತಡೆಯಾಜ್ಞೆ ನೀಡಿದೆ.<br>4. ಶ್ರೀಮತಿ ಅನುಸೂಯಾ, (ಹಿಂದಿನ ಸಹಾಯಕ ಆಡಳಿತಾಧಿಕಾರಿಗಳು) ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಮುಂದುವರೆದು ಸದರಿಯವರನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂದಿರುಗಿಸಲಾಗಿದೆ.<br>5. ಶ್ರೀ ಬಾಬು ಕೋಟೆ, (ಹಿಂದಿನ ಕಛೇರಿ ಅಧೀಕ್ಷಕರು) ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಮುಂದುವರೆದು ಸದರಿಯವರನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂತಿರುಗಿಸಲಾಗಿದೆ. |



Generated from eOffice by DR.K SUDHAKAR, MED-MIN(SK), MINISTER, MEDICAL EDUCATION SEC on 09/09/2022 01:42 PM

| | | |
|---|---|---|
| | | 6. ಶ್ರೀ ಪ್ರಕಾಶ ಮಡಿವಾಳ (ಹಿಂದಿನ ಕಛೇರಿ ಅಧೀಕ್ಷಕರು) ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಮುಂದುವರೆದು ಸದರಿಯವರನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂತಿರುಗಿಸಲಾಗಿದೆ.<br>7. ಶ್ರೀ ಪ್ರಕಾಶ ಮಾಳಗೆ,. (ಹಿಂದಿನ ಪ್ರಥಮ ದರ್ಜೆ ಸಹಾಯಕರು) ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಮುಂದುವರೆದು ಸದರಿಯವರನ್ನು ಮಾತೃ ಇಲಾಖೆಯಾದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಿಂತಿರುಗಿಸಲಾಗಿದೆ.<br>8. ಶ್ರೀಮತಿ ವರ್ಷಾ ದೇಶಮುಖ, ಪ್ರ.ದ.ಸ. ಸದರಿಯವರು ಅಮಾನತ್ತುಗೊಂಡು ಮರುಸ್ಥಾಪನೆಗೊಂಡಿರುತ್ತಾರೆ.<br>9. ಶ್ರೀ ಮಾಚಾ ಕಲ್ಲಪ್ಪಾ, (ಹಿಂದಿನ ನಿವೃತ್ತ ಕಛೇರಿ ಅಧೀಕ್ಷಕರು) ಮರಣ ಹೊಂದಿರುತ್ತಾರೆ.<br>10. ಶ್ರೀ ಶಿವಾಜಿ ಹೊರಗುತ್ತಿಗೆ ನೌಕರರ ಪ್ರಸ್ತುತವಾಗಿ ಬ್ರೀಮ್ಸ್ ಬೋಧಕ ಆಸ್ಪತ್ರೆ, ಬೀದರ್ ನಿಂದ ಬಿಡುಗಡೆಗೊಳಿಸಲಾಗಿದೆ. |
| ಇ) | ಕೋಟ್ಯಾಂತರ ರೂಪಾಯಿಯ ಹಗರಣ ಮಾಡಿದ ಸಿಬ್ಬಂದಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಲು ಹಿಂಜರಿಯುತ್ತಿರುವುದೇಕೆ; ಯಾವ ಸದುದ್ದೇಶದಿಂದ ಅವರಿಗೆ ರಕ್ಷಣೆ ನೀಡಲಾಗಿದೆ? (ವಿವರ ನೀಡುವುದು) | ಶ್ರೀ ಮಾಚಾ ಕಲ್ಲಪ್ಪಾ, (ಹಿಂದಿನ ನಿವೃತ್ತ ಕಛೇರಿ ಅಧೀಕ್ಷಕರು ಮರಣ ಹೊಂದಿರುತ್ತಾರೆ) ಹಾಗೂ ಶ್ರೀ ಶಿವಾಜಿ, ಹೊರಗುತ್ತಿಗೆ ನೌಕರರು ಇವರುಗಳನ್ನು ಹೊರತುಪಡಿಸಿ ಉಳಿದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಲಾಗಿದೆ. ಉಳಿದ 8 ಅಧಿಕಾರಿ/ನೌಕರರುಗಳ ವಿರುದ್ಧ ವೈದ್ಯಕೀಯ ಶಿಕ್ಷಣ ಇಲಾಖೆಯ ವತಿಯಿಂದ ಜಂಟಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸಿ ದಿನಾಂಕ:05/01/2021 ರಂದು ಆದೇಶ ಹೊರಡಿಸಿ ಕ್ರಮ ಜರುಗಿಸಲಾಗಿದೆ.<br>ಸದರಿ ಆದೇಶವನ್ನು ಪ್ರಶ್ನಿಸಿ ಡಾ\|\| ಚನ್ನಣ್ಣ ಸಿ. ಹಾಗೂ ಡಾ\|\| ಶಿವಕುಮಾರ ಶೆಟಕಾರ ಇವರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಪಿಟೀಷನ್ ಸಂ: 4177/2021 (S-RES) ದಾಖಲಿಸಿ ದಿನಾಂಕ:26/02/2021 ರಂದು ತಡೆಯಾಜ್ಞೆ ಪಡೆದಿರುತ್ತಾರೆ. ಹಾಗೂ ಶ್ರೀ ಪ್ರಕಾಶ ಎಸ್. ಮಡಿವಾಳ, ಶ್ರೀಮತಿ ವರ್ಷಾ ಹಾಗೂ ಶ್ರೀ ಬಾಬು ಕೋಟೆ ಇವರು ಉಚ್ಚ ನ್ಯಾಯಾಲಯ ಕಲಬುರ್ಗಿ ಪೀಠ ಇಲ್ಲಿ ರಿಟ್ ಪಿಟೀಷನ್ ಸಂ: 200587/2021 ದಾಖಲಿಸಿ ದಿನಾಂಕ:17/03/2021 ರಂದು ಹಾಗೂ ಶ್ರೀ ಆನಂದ ಸಾಗರ್ ರೆಡ್ಡಿ ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ರಿಟ್ ಅರ್ಜಿ ಸಂ: 1650/2021 ರಲ್ಲಿ ದಿನಾಂಕ:02/06/2021 ರಂದು ತಡೆಯಾಜ್ಞೆಯನ್ನು ಪಡೆದಿರುತ್ತಾರೆ. ಸದರಿ ತಡೆಯಾಜ್ಞೆಗಳನ್ನು ತೆರವುಗೊಳಿಸಲು ಸರ್ಕಾರಿ ವಕೀಲರನ್ನು ಅಧಿಕೃತಗೊಳಿಸಿ ರಂದು ಸರ್ಕಾರಿ ವಕೀಲರಿಗೆ ಕಂಡಿಕೆವಾರು ಷರಾಗಳನ್ನು ಒದಗಿಸಲಾಗಿರುತ್ತದೆ. |

<u>ಕಡತ ಸಂ: ಎಂಇಡಿ **359** ಎಂ ಎಸ್ ಎಫ್ **2022**</u>

(ಡಾ|| ಕೆ. ಸುಧಾಕರ್)
ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ
ಸಚಿವರು.



Generated from eOffice by DR K SUDHAKAR, MED-MIN(SK), MINISTER, MEDICAL EDUCATION SEC on 09/09/2022 01:42 PM